ಒ.ಎಸ್. ನಂ.96/2021
ಪಿಡಬ್ಲು-1

ದಿನಾಂಕ 09.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಿಪಿ-28 ರ ಪ್ರಕಾರ ಕರಾರ ಪತ್ರವಿದ್ದು ಪಾಲು ಪತ್ರ ಅಲ್ಲ ಎಂದರೆ ಸರಿ. ನಿಪಿ-28 ರಲ್ಲಿ ನನ್ನ ತಂಗಿಯರ ಹೆಸರು ಇದ್ದು ಅವರು ಸಹ ಹೆಬ್ಬೆಟ್ಟಿನ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ-28 ರಲ್ಲಿ ಸರ್ವೆ ನಂ.149 ರಲ್ಲಿ 7-ಎಕರೆ 28-ಗುಂಟೆ ಜಮೀನನ್ನು ಸ್ವಾಧಿನ ನೀಡಿರುತ್ತಾರೆ ಎಂದು ಬರೆಸಿಲ್ಲ ಎಂದರೆ ಸರಿಯಲ್ಲ. ನಿಪಿ-28 ರಲ್ಲಿ ರೂ.8000/- ಸಾಲವಿರುತ್ತದೆ ಎಂದು ಬರೆಸಿದ್ದು ಅದನ್ನು ಯಾರು ಕೊಟ್ಟರು ಯಾರ ಸಾಲ ತೀರಿಸಿದರು ಎಂದು ಬರೆಸಿಲ್ಲ ಎಂದರೆ ಸಾಕ್ಷಿ ಊರಿನ ನಾಲ್ಕು ಜನ ಬರೆಸಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-28 ಮಾಡಿಕೊಡುವಾಗ ದಾವಾಸ್ತಿಯನ್ನು ನನ್ನ ತಂದೆ ಸರ್ವೆ ಮಾಡಿಸಿದ್ದಾರಾ ಎಂದರೆ ಸಾಕ್ಷಿ ನನ್ನ ತಂದೆಗೆ ಏನೂ ತಿಳಿಯುತ್ತಿರಲಿಲ್ಲ ಎಂದು ಹೇಳುತ್ತಾರೆ. ನಿಪಿ-28 ರಲ್ಲಿ ಚೆಕಬಂದಿ ಬರೆಸಿಲ್ಲ ಎಂದರೆ ಸರಿಯಲ್ಲ. ನಿಪಿ-28 ರ ಪ್ರಕಾರ ನನಗೆ ದಾವಾಸ್ತಿಯಲ್ಲಿ ಯಾವುದೆ ಮಾಲಿಕತ್ವ ಇಲ್ಲ ಎಂದರೆ ಸರಿಯಲ್ಲ.

ನಿಪಿ-30 ರಲ್ಲಿ ನಾಗಮ್ಮ ಎಂದು ನಮೂದಾಗಿದೆ ಎಂದರೆ ಸರಿ. ದಿನಾಂಕ 28.12.1995 ರಲ್ಲಿ ನಿಪಿ-30 ನ್ನು ಬರೆಸಿದ್ದು ಆದರೆ ದಿನಾಂಕ 17.04.1996 ರಲ್ಲಿ ನೋಟರಿ ಮಾಡಿಸುತ್ತೀರಿ ಎಂದರೆ ಸರಿಯಲ್ಲ. ನಿಪಿ-29 ರಲ್ಲಿ declaration ನಲ್ಲಿ ಪಾರ್ವತಿ ಗಂಡ ನಿಂಗಪ್ಪ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. 1995 ರಲ್ಲಿ ನೊಂದಾಯಿತ ಪಾಲು ಪತ್ರ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ಎಂದು ಹೇಳುತ್ತಾರೆ. ನಿಪಿ-29 ಮತ್ತು 30 ಇಂಗ್ಲೀಷ್ ಭಾಷೆಯಲ್ಲಿದ್ದು ಅದನ್ನು ಬರೆದವರ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ದಿನಾಂಕ, ತಿಂಗಳು, ವರ್ಷ ನಮೂದಾಗಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಪಾಲು ಪತ್ರ ಮಾಡಿಕೊಟ್ಟ ಬಗ್ಗೆ ಕಾಗದ ಪತ್ರವನ್ನು ಹಾಜಪಡಿಸಿಲ್ಲ ಎಂದರೆ ಸರಿ. ಕೇವಲ ನೊಂದಾಯಿತವಲ್ಲದ ವಾಟ್ನಿ ಪತ್ರ ಕಾನೂನು ಬದ್ಧವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು 1995 ರಲ್ಲಿ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-29 ಮಾಡಿಕೊಡುವಾಗ ನನ್ನ ತಂದೆ-ತಾಯಿ ಜೀವಂತವಿದ್ದರು ಎಂದರೆ ಸರಿ. ನಿಪಿ-28 ನ್ನು ಬರೆದವರ ಹೆಸರು ಗೊತ್ತಾ ಎಂದರೆ ಸಾಕ್ಷಿ ಊರಿನ ಗೌಡರ

ಮನೆಯಲ್ಲಿ ಬರೆಸಿರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ-28 ರಲ್ಲಿರುವ ಸಾಕ್ಷಿದಾರರು ಜೀವಂತವಿರುವುದಿಲ್ಲ. ನಿಪಿ-29 ಮತ್ತು 30 ರಲ್ಲಿನ ಸಾಕ್ಷಿದಾರರು ಜೀವಂತವಿರುವುಲ್ಲ.

ದಾವಾಸ್ತಿಗೆ ಸಂಬಂಧಿಸಿದಂತೆ ಫಾರಂ ನಂ.10 ರದ್ದಾಗಿರುತ್ತದೆ ಎಂದರೆ ಸರಿ. ಅದನ್ನು ಪ್ರಶ್ನಿಸಿ ನೀವು ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಮೇಲ್ಮನವಿಯಲ್ಲಿ ತಡೆಯಾಜ್ಞೆ ನೀಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಗೆ ಎಷ್ಟು ಜಮೀನು ಬಂದಿರುತ್ತದೆ ಎಂದು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ. ಎಡಿಎಲ್ಆರ್ ರವರು ಸ್ವಾಧಿನತೆ ಮತ್ತು ಪಹಣಿಗಳಲ್ಲಿ ಕ್ಷೇತ್ರ ವ್ಯತ್ಯಾಸ ಇದೆ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾಸ್ತಿಯ ಮೊದಲಿನ ಒಡ್ಡನ್ನು ಒಡೆದು ಬದಾಲಿಯಿದ್ದೇನೆ ಎಂದರೆ ಸರಿಯಲ್ಲ. ನನ್ನ 28-ಗುಂಟೆ ಜಮೀನು ಭೂ ಸ್ವಾಧಿನತೆಯಾಗಿದೆ ಎಂದರೆ ಸರಿ. ಪ್ರತಿವಾದಿಯ 20-ಗುಂಟೆ ಜಮೀನು ಭೂ ಸ್ವಾಧಿನತೆಯಾಗಿದೆ ಎಂದರೆ ಸರಿ. ದಿನಾಂಕ 25.07.2019 ರಂದು ಗ್ರಾಮ ಲೆಕ್ಕಿಗರು ನಮ್ಮ ಜಮೀನಿಗೆ ಬಂದಿದ್ದರು ಎಂದರೆ ಸರಿ. ನಾನು ಪ್ರತಿವಾದಿಯ ಜಮೀನು ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಮತ್ತು ಪ್ರತಿವಾದಿ ಕಬ್ಜಾ ಪ್ರಕಾರ ಮಾಲಿಕರು ಇರುತ್ತೇವೆ ಆದರೆ ಪಹಣಿ ಪ್ರಕಾರ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಹಣಿ ಪ್ರಕಾರ ಕಬ್ಜೆಯಲ್ಲಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿಯ ಜಮೀನಿನ ನಡುವೆ ಒಂದು ಬಾಂದಾರಿ ಇದ್ದು ಅಲ್ಲಿ ಒಂದು ದೊಡ್ಡ ಗಿಡ ಇರುತ್ತದೆ ಸಾಕ್ಷಿ ನಮ್ಮ ಹೊಲದಲ್ಲಿ ಗಿಡ ಇರುತ್ತದೆ ಎಂದು ಹೇಳುತ್ತಾರೆ. ಈ ಕುರಿತು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ಸದರಿ ಗಿಡದ ನಂತರ ಪ್ರತಿವಾದಿಯ ಜಮೀನು ಇದ್ದು ಸಾಗುವಳಿ ಮಾಡುತ್ತಾರೆ ಎಂದರೆ ಸಾಕ್ಷಿ ನಾವೆ ಸಾಗುವಳಿ ಮಾಡುತ್ತೇನೆ ಎಂದು ಹೇಳುತ್ತಾರೆ. ಹೀಗೆಂದು ನನ್ನ ವಾದ ಪತ್ರದಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪಹಣಿಯಂತೆ ಕಬ್ಜೆಯಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ